## ಅರ್ಚನಾ ಪೈನ್ಯೂಲಿ



ಅರ್ಚನಾ ಪೈನ್ಯೂಲಿ ಉತ್ತರಾಖಂಡದ ರಾಜಧಾನಿ ಡೆಹರಾಡೂನಿನವರು. ಡೆನ್ಮಾರ್ಕ್‌ನಲ್ಲಿ ವಾಸ. ವೃತ್ತಿಯಿಂದ ಅಧ್ಯಾಪಕಿ. ಇಂಡಿಯನ್ ಡೈಸ್ಪೋರಾ ಮತ್ತು ಸ್ಕಾಂಡಿನೇವಿಯನ್ ದೇಶಗಳಲ್ಲಿ ನೆಲೆಸಿರುವ ಭಾರತೀಯ ಸಮುದಾಯದ ಬಗ್ಗೆ ನಿರಂತರ ಬರವಣಿಗೆ. ಇದುವರೆಗೆ ಅರ್ಚನಾ ಅವರ ನಾಲ್ಕು ಕಾದಂಬರಿಗಳು, ಎರಡು ಕಥಾ ಸಂಕಲನಗಳು ಪ್ರಕಟಗೊಂಡಿವೆ. ಅಲ್ಲದೆ ಅವರ 'ವೇರ್ ಡೂ ಐ ಬಿಲಾಂಗ್' ಡೆನಿಶ್ ಸಮಾಜದ ಬಗ್ಗೆ ಹಿಂದಿಯಲ್ಲಿ ಬರೆದ ಮೊದಲ ಕಾದಂಬರಿಯಾಗಿದೆ. 'ಸುಧಾ' ಓದುಗರಿಗೂ ಇವರದು ಚಿರಪರಿಚಿತ ಹೆಸರು.

## ಡಿ.ಎನ್. ಶ್ರೀನಾಥ್



ಅನುವಾದಕ್ಕಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿರುವ ಡಿ.ಎನ್. ಶ್ರೀನಾಥ್, ಅನುವಾದಿತ ಕೃತಿಗಳ ಮೂಲಕವೇ ಸಹೃದಯರಿಗೆ ಪರಿಚಿತರು. ಶಿವಮೊಗ್ಗದಲ್ಲಿ ನೆಲೆ. ಕನ್ನಡ ಮತ್ತು ಹಿಂದಿಯ ನಡುವೆ ಸಾಂಸ್ಕೃತಿಕ ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತಿರುವ ಅವರು, ನೂರಕ್ಕೂ ಹೆಚ್ಚು ಕೃತಿಗಳನ್ನು ಅನುವಾದಿಸಿದ್ದಾರೆ. ಕನ್ನಡಕ್ಕೆ ತಂದಿರುವ ನೂರಾರು ಕಥೆಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ, ಹತ್ತಾರು ಕಾದಂಬರಿಗಳು ಧಾರಾವಾಹಿಗಳಾಗಿ ಪ್ರಕಟಗೊಂಡು ಓದುಗರ ಮೆಚ್ಚುಗೆ ಪಡೆದಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಪ್ರಶಸ್ತಿ, ಶಿವಮೊಗ್ಗದ ಕರ್ನಾಟಕ ಸಂಘದ ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರ ಅನುವಾದ ಪ್ರಶಸ್ತಿ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಗೌರವ ಪ್ರಶಸ್ತಿ ಸೇರಿದಂತೆ ಹಲವು ಗೌರವಗಳು ಶ್ರೀನಾಥ್ ಅವರ ಸೃಜನಶೀಲತೆಗೆ ಸಂದಿವೆ. ಉತ್ತರ ಪ್ರದೇಶ್ ಹಿಂದಿ ಸಂಸ್ಥಾನದ ಸೌಹಾರ್ದ ಸಮ್ಮಾನ್ ಪ್ರಶಸ್ತಿಯೂ ಅವರಿಗೆ ಸಂದಿದೆ. 'ನ್ಯಾನ್ಸಿ ಮಸಾಜ್ ಪಾರ್ಲರ್' ಅನುವಾದಿತ ಕೃತಿಯ ಮೂಲಕ 'ಸುಧಾ' ಓದುಗರಿಗೆ ಪರಿಚಿತರಾದ ಶ್ರೀನಾಥ್, ಈಗ 'ಪಾಲ್‌ನ ತೀರ್ಥಯಾತ್ರೆ' ಮೂಲಕ ಮತ್ತೆ ಸಹೃದಯರಿಗೆ ಮುಖಾಮುಖಿಯಾಗಿದ್ದಾರೆ.

ತಿಂಗಳ ಹದಿಮೂರನೆಯ ತಾರೀಕು... ಇದು ನನ್ನ ಪ್ರೇಯಸಿಯ ಸಾವಿನ ತಿಥಿ. ಈ ದಿನವನ್ನು ಅವಳಿಗೆ ಸಮರ್ಪಿಸುತ್ತೇನೆ. ಆಮೆನ್!

### ಪಾದಯಾತ್ರೆ: ಒಂದು ಅಭಿಯಾನ

ಸಿದ್ಧಿವಿನಾಯಕ ಟೆಂಪಲ್ – ನೀನಾಳ ತಾಯಿ ಹೇಳಿದ್ದ ಈ ದೇವಸ್ಥಾನದ ಹೆಸರನ್ನು ನಾನು ಪದೇ ಪದೇ ಓದುತ್ತಿದ್ದೆ. ನಾನು ಡೆನ್ಮಾರ್ಕ್‌ನಲ್ಲಿ ಹಿಂದೂ ಮಂದಿರ, ಹರೇಕೃಷ್ಣ ಮಂದಿರ, ಬುದ್ಧ ಟೆಂಪಲ್‌ಗಳ ಹೆಸರನ್ನು ಕೇಳಿದ್ದೆ, ಒಂದೆರಡು ದೇವಸ್ಥಾನಗಳಿಗೆ ನೀನಾಳೊಂದಿಗೆ ಹೋಗಿಯೂ ಬಂದಿದ್ದೆ. ಆದರೆ ಸಿದ್ಧಿವಿನಾಯಕ ಮಂದಿರದ ಹೆಸರನ್ನು ಕೇಳಿರಲಿಲ್ಲ. ಇದು ತಮಿಳಿಯನ್ ದೇವಸ್ಥಾನವಾಗಿದ್ದು, ಸುಮಾರು ಮೂರು ವರ್ಷಗಳ ಹಿಂದೆಯಷ್ಟೇ ನಿರ್ಮಾಣವಾಗಿದೆ ಎಂದು ಶೀಲಾ ದೇವಿಯವರು ಹೇಳಿದ್ದರು.

ಮಂದಿರ ನನ್ನ ಮನೆಯಿಂದ ಮೈಲಿಗಟ್ಟಲೆ ದೂರದಲ್ಲಿ, ಜೀಲ್ಯಾಂಡ್ ದ್ವೀಪದ ದಕ್ಷಿಣ ಪಶ್ಚಿಮದ ತುದಿಯ ನಗರ ನೈಸ್ಟ್‌ವೆಡ್ ಸಮೀಪದ ಸ್ಲೆಯೆಲ್ಸೆವಾಯ್ ಎಂಬ ಹೆಸರಿನ ರಸ್ತೆಯಲ್ಲಿದೆ. ನಾನು ಜೀಲ್ಯಾಂಡ್ ದ್ವೀಪದ ಉತ್ತರದ ತುದಿಯಲ್ಲಿದ್ದೇನೆ. ನನ್ನ ಮನೆಯಿಂದ ಆ ದೇವಸ್ಥಾನ ಒಂದು ನೂರಾ ಎಂಟು ಕಿ.ಮೀ. ದೂರದಲ್ಲಿತ್ತು. ಎರಡು ಬಸ್‌ಗಳು ಮತ್ತು ಎರಡು ಟ್ರೈನ್‌ಗಳನ್ನು ಬದಲಿಸಬೇಕಿತ್ತು. ತಲುಪಲು ಎರಡು ಎರಡೂವರೆ ಗಂಟೆಗಳು ಬೇಕಾಗಬಹುದು. ಡ್ರೈವ್ ಮಾಡಿಕೊಂಡು ಹೋದರೆ ಒಂದೂವರೆ ಗಂಟೆಯಾಗಬಹುದು. ಏನು ಮಾಡಲಿ? ಡ್ರೈವ್ ಮಾಡಿಕೊಂಡು ಹೋಗಲೋ ಅಥವಾ ಪಬ್ಲಿಕ್ ಟ್ರಾನ್ಸ್‌ಪೋರ್ಟ್ ತೆಗೆದುಕೊಳ್ಳಲೋ? ಅಕಸ್ಮಾತ್ ನನ್ನ ಮನಸ್ಸಿಗೆ ವಿಚಾರವೊಂದು ಹೊಳೆಯಿತು – ಕಾಲ್ನಡಿಗೆಯಲ್ಲಿ ಹೋಗುವ ವಿಚಾರ! ನಾನು ಪಾದಯಾತ್ರೆ ಕೈಗೊಳ್ಳುತ್ತೇನೆ. ಯಸ್... ಹೀಗೆಂದು ಯೋಚಿಸಿ ಉತ್ತೇಜಿತನಾದೆ. ನನ್ನ ಚಿಕ್ಕ ಮನೆಯೊಳಗೆ ಅತ್ತ ಇತ್ತ ಅಡ್ಡಾಡಿದೆ. ಒಂದು ನೂರಾ ಎಂಟು ಕಿ.ಮೀ. ಪಾದಯಾತ್ರೆ!

ಒಂದು ನೂರಾ ಎಂಟು!

108 ಅಂಕೆಗಳು ಇದ್ದಕ್ಕಿದ್ದಂತೆ ನನ್ನೊಳಗೆ ಮೊಳಗಿದವು. ಡಾ. ರಾಮಚಂದ್ರರು ಇದನ್ನು ಪ್ರಸ್ತಾಪಿಸಿದ್ದರು. ಅವರನ್ನು ಹೊರತುಪಡಿಸಿ ಬೇರಾರು ಪ್ರಸ್ತಾಪಿಸುವುದು ಸಾಧ್ಯವಿತ್ತು ಎಂಬುದು ನೆನಪಾಯಿತು.

ಅವರು ತಮ್ಮ ತುಳಸಿಯ ಜಪಮಾಲೆಯನ್ನು ತೋರಿಸುತ್ತಾ ಹೇಳಿದ್ದರು, 'ಇದರಲ್ಲಿ 108 ಮಣಿಗಳಿವೆ. ಹಿಂದೂ ಧರ್ಮ ಮತ್ತು ಇನ್ನಿತರ ಪೂರ್ವದ ಧರ್ಮಗಳಲ್ಲಿ ಒಂದು ನೂರಾ ಎಂಟು – ಇದನ್ನು ಒಂದು ಪವಿತ್ರ ಸಂಖ್ಯೆಯೆಂದು ತಿಳಿಯಲಾಗುತ್ತದೆ. ಅದಕ್ಕಾಗಿ ಜಪಮಾಲೆಗಳಲ್ಲಿ 108 ಮುತ್ತುಗಳಿರುತ್ತವೆ. ಬೆಟ್ಟಗಳಲ್ಲಿ ನಿರ್ಮಾಣಗೊಂಡ ಅನೇಕ ಮಂದಿರಗಳನ್ನು ಹತ್ತಲು 108 ಮೆಟ್ಟಿಲುಗಳನ್ನು ಹಾಕಲಾಗುತ್ತದೆ. ಬೌದ್ಧ ಮಂದಿರಗಳಲ್ಲಿ ಹೊಸವರ್ಷದ ಆಗಮನದಂದು 108 ಬಾರಿ ಗಂಟೆಯನ್ನು ಬಾರಿಸಲಾಗುತ್ತದೆ. ಪ್ರತಿಯೊಂದು ಗಂಟೆ ನಮ್ಮ 108 ಸಾಂಸಾರಿಕ ಬಯಕೆಗಳಲ್ಲಿ ಒಂದನ್ನು ದೂರ ಮಾಡುವ ಮತ್ತು ನಿರ್ವಾಣ ಪ್ರಾಪ್ತಿಗೆ ಕಾರಣವಾಗುತ್ತದೆ.

ಸಮುದ್ರಮಂಥನದ ವೇಳೆಯಲ್ಲಿ ಒಂದು ಕಡೆ 54 ದೇವತೆಗಳು, ಇನ್ನೊಂದು ಕಡೆ 54 ಅಸುರರು ಅಂದರೆ 108 ಜನ ಬೃಹತ್ ಸರ್ಪವನ್ನು ಹಿಡಿದು ಸಾಗರವನ್ನು ಮಥಿಸಿದ್ದರು. ಮೊದಲು ಸಮುದ್ರ ವಿಷವನ್ನು ಕಾರಿತು, ಆ ವಿಷವನ್ನು ಶಿವ ಕುಡಿದ. ನಂತರ ಅದರ ಗರ್ಭದಿಂದ ಬೇರುನಾರುಗಳು, ರತ್ನಗಳು, ವಜ್ರಗಳು ಕಡೆಗೆ ಅಮರತ್ವವನ್ನು ಕೊಡುವ ಅಮೃತ ಬಂತು. ಸಮುದ್ರಮಂಥನದ ಕಥೆ ನನಗೆ ಅತ್ಯಂತ ರೋಚಕವೆನಿಸಿತ್ತು. ನಾನು ಅವರಿಗೆ ಸಮುದ್ರವನ್ನು ಇಂದೂ ಸಹ ಮಥಿಸಲಾಗುತ್ತಿದೆ ಎಂದೆ.

ಸರಿ, ನಾನು ಪಾಲ್ ಸ್ಕಾಟ್, 108 ಕಿ.ಮೀ. ಪ್ರಯಾಣವನ್ನು ಮಾಡುತ್ತೇನೆ. ನಾನು ಗೂಗಲ್ ಮ್ಯಾಪ್‌ನಲ್ಲಿ ಮಾರ್ಗವನ್ನು ನೋಡಿದೆ. ನನ್ನ ಬಿಡಾರ ವಾಯಲೆಸೋಪಾರಕನ್, ಹೋಲ್ಟೆಯಿಂದ ವಿರಮ್. ನಂತರ ಬೌಸವಿಯಾ, ನಂತರ ಹರಲೇವ್‌ನಿಂದ ಹಾದು ಬೆಲರೂಪ್, ನಂತರ ತಾಸ್ಟ್ರುಪ್, ನಂತರ ರೋಸಕಿಲ್ಡೆ ಕೌಂಟಿ, ನಂತರ ಓಸ್ಟೆಡ್. ಅಲ್ಲಿಂದ ರಿಂಗಸಟೆಡ್‌ನಿಂದ ಹಾದು ಹರಲೂಫಮೆಗಲೆ. ನಂತರ ನೈಸ್ಟ್‌ವೆಡ್, ಕಾರ್‌ರೆಂಬೈಕವಾಯ್‌ನಿಂದ ನೇರ ಸ್ಲೆಯೆಲಸೆವಾಯ್ ರಸ್ತೆಗೆ. ನಾನು ವೇಗವಾಗಿ ನಡೆಯುತ್ತೇನೆ, ಒಂದು ವೇಳೆ ಪ್ರತಿ ಗಂಟೆಗೆ ಆರೇಳು ಕಿ.ಮೀ. ವೇಗದಲ್ಲಿ ನಡೆದರೆ ದೇವಸ್ಥಾನವನ್ನು ತಲುಪಲು ಇಪ್ಪತ್ತೆರಡು ಇಪ್ಪತ್ತಮೂರು ಗಂಟೆಗಳು ಹಿಡಿಯುತ್ತವೆ. ಹೌದು... ನಾನು ನೀನಾಳ ಪುಣ್ಯತಿಥಿಯ ಸಂದರ್ಭದಲ್ಲಿ ದೇವಸ್ಥಾನಕ್ಕೆ ಹೋಗಲು ಪಾದಯಾತ್ರೆಯನ್ನು ಮಾಡುತ್ತೇನೆ. ಇದು ನೀನಾಳಿಗೆ ನಾನು ಅರ್ಪಿಸುವ ಶ್ರದ್ಧಾಂಜಲಿಯಾಗುತ್ತದೆ. ಮೇ ಹನ್ನೆರಡು ಮತ್ತು ಹದಿಮೂರು, ಎರಡೂ ದಿನಗಳ ವಾತಾವರಣ ಹಿತಕರವಾಗಿರುತ್ತದೆ ಎಂದು ಹವಾಮಾನ ವರದಿ ಹೇಳಿದೆ. ಸೂರ್ಯ ಹೊಳೆಯುತ್ತಾನೆ. ವಾಹ್...!

ನಾನು ಲೂಸಿಗೆ ನನ್ನ ಪಾದಯಾತ್ರೆ ಅಭಿಯಾನದ ಬಗ್ಗೆ ಹೇಳಿದಾಗ ಅವಳು ಹೇಳಿದಳು, 'ಪಪ್ಪಾ, ನೀವು ಆಂಟಿ ನೀನಾರ ವರ್ಷಾಂತಿಕಕ್ಕೆ ಖಂಡಿತ ಹೋಗಿ, ಆದರೆ ನಡೆದು ಹೋಗಬೇಡಿ...